take action to recover the difference from the previous Contractor within the time limit so that the claim will not become time barred-

SRI KAGODU THIMMAPPA.—I will go through the previous records. The suggestion of the Hon'ble Member will be taken note of.

ಶ್ರೀ ಎಚ್ ಗಂಗಾಧರನ್.—ರೆಕವರಿ ಮಾಡಲಿಕ್ಕೆ ಸಾಧ್ಯವಿಲ್ಲ. Insolvency application ಹಾಕಿದ್ದಾರೆ, ಈ ಸೇತುವೆಗೆ ಕನ್ ಸರ್ನ್ ಇದ್ದ ಹಾಗೆ ಕೊಟ್ಟಿಂಥ ಸಿಮೆಂಟ್ ಅಧಿಕಾರಿಗಳಿಂದ ದುರುಪ ಯೋಗವಾಗಿದೆ ಅಂಥ ಸರ್ಕಾರದ ಗಮನಕ್ಕೆ ಬಂದಿದೆಯೇ ? ಬಂದಿದ್ದರೆ ಏನು ಕ್ರಮ ತೆಗೆದುಕೊಂಡಿದ್ದೀರಾ ?

ಶ್ರೀ ಕಾಗೋಡು ತಿಮ್ಮಪ್ಪ.—ಸರ್ಕಾರದ ಗಮನಕ್ಕೆ ಬಂದಿಲ್ಲ, ಮಾನ್ಯ ಸದಸ್ಯರು ಮಾಹಿತಿ ಕೊಟ್ಟರೆ ತನಿಖೆ ಮಾಡಿಸುತ್ತೇನೆ.

ಶ್ರೀ ಹೆಚ್. ಗಂಗಾಧರನ್.—ನಾನು ಮುಖ್ಯಮಂತ್ರಿಗಳಿಗೂ ತಮಗೂ ಪತ್ರ ಬರೆದಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ತಾವು ಏನು ಆಪಾದನೆ ಮಾಡಿದ್ದೀರಾ ಅದನ್ನು ಎಸ್.ವಿ.ಸಿ.ಗೆ ರೆಫರ್ ಮಾಡಿದ್ದೇನೆ.

ಶ್ರೀ ಕೆ. ಬಿ. ಶಿವಯ್ಯ.—ಬರುವ ಅಕ್ಟೋಬರ್ ತಿಂಗಳಲ್ಲಿ ಮುಗಿಸುತ್ತೇವೆಂದು ಮಾನ್ಯ ಸಚಿವರು ಭರವಸೆ ಕೊಟ್ಟಿದ್ದಾರೆ. ಈ ಅಪ್ರೋಚ್ ರೋಡ್‌ಗಳನ್ನು ಮಾಡಿಸಬೇಕಾದರೆ ಟೆಂಡರ್‌ಗೆ ಕೊಡಬೇಕಾಗುತ್ತದೆ. ಅದೆಲ್ಲಾ ಆಗಬೇಕಾದರೆ ಒಂದು ವರ್ಷ ಆಗುತ್ತದೆ. ಆದ್ದರಿಂದ, ಈ ಟೆಂಡರ್ ಕರೆಯುವುದನ್ನು ಬಿಟ್ಟು, ಇಲಾಖೆಯ ಪತಿಯಿಂದಲೇ ಈ ಕೆಲಸವನ್ನು ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕಾಗೋಡು ತಿಮ್ಮಪ್ಪ.—ಇಲಾಖೆಯವರೇ ನೇರವಾಗಿ ಮಾಡುತ್ತಾರೆ. ಈಗಾಗಲೇ ನಾವು ಎರಡು ಸಾರಿ ಹೋಗಿ ನೋಡಿಕೊಂಡು ಬಂದಿದ್ದೇವೆ. I am also equally interested to see that this must be completed as early as possible.

MR. SPEAKER.—Question hour is over.

Presentation of the Report

Fifth Report of the Committee on Private Members Bills as Resolutions

SRI BABU RAO HULSURKAR (Deputy Speaker)—Sir, I present the Fifth Report of the Committee on Private Members' Bills and Resolutions.

ಶ್ರೀ ಡಿ. ಟಿ. ಮಾಯಣ್ಣ.—ಈ ವರದಿಯನ್ನು ಮಾನ್ಯ ಸಭೆಯು ಅನುಮೋದಿಸಬೇಕೆಂದು ಪ್ರಾರ್ಥಿಸುತ್ತೇನೆ.

MR. SPEAKER.—I think the House agrees with the Report.

ಮ ನ ವಿ ಗ ಳು

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೆ, ಮುಂದಿನ ಕಾರ್ಯಕ್ರಮಕ್ಕೆ ಹೋಗುವುದಕ್ಕೆ ಮೊದಲು ಒಂದು ವಿಚಾರವನ್ನು ಪ್ರಸ್ತಾಪ ಮಾಡಬೇಕಾಗಿದೆ. ಅದೇನೆಂದರೆ ಇವತ್ತಿನ ಪತ್ರಿಕೆಯಲ್ಲಿ ನಮ್ಮ ರಾಜ್ಯಕ್ಕೆ ಸಂಬಂಧಪಟ್ಟಿಂಥ ಒಂದು ಮಹತ್ವದ ಸುದ್ದಿ ಬಂದಿದೆ. ಈಗಿನ ಮುಖ್ಯ ಮಂತ್ರಿಗಳು ಬದಲಾವಣೆಯಾಗಿ ಯಾರೋ ಬೀದರ್‌ನ ಎಂ.ಪಿ. ಒಬ್ಬರು ಇಲ್ಲಿಗೆ ಮುಖ್ಯ ಮಂತ್ರಿಗಳಾಗಿ ಬರುತ್ತಾರೆಂದೂ, ಇವರು ಕೇಂದ್ರಕ್ಕೆ ಹೋಗುತ್ತಾರೆಂದೂ ತಿಳಿದುಬಂದಿದೆ. ಈಗಿನ ಮುಖ್ಯ ಮಂತ್ರಿಯವರು ಚುನಾವಣೆ ಆಗುವವರೆಗೂ ಇರುತ್ತಾರೆ, ಅವರ ಪಕ್ಷವೇ ಚುನಾವಣೆಯಲ್ಲಿ ಗೆದ್ದು ಬಂದರೆ